
## ಕನ್ನಡ ಪತ್ರಿಕೋದ್ಯಮ: ಮೂವತ್ತು ವರ್ಷ

ಪದ್ಮರಾಜ ದಂಡಾವತಿ ಅವರ 'ಕನ್ನಡ ಪತ್ರಿಕೋದ್ಯಮ: ಮೂವತ್ತು ವರ್ಷ' ಕೃತಿ, ಕೊರೊನಾ ಸೋಂಕಿನ ತೀವ್ರತೆಯ ಅವಧಿಯೂ ಒಳಗೊಂಡ ಆಧುನಿಕ ಕಾಲಘಟ್ಟದ ಪತ್ರಿಕೋದ್ಯಮದ ತವಕ ತಲ್ಲಣಗಳ ಕಥನ.




ಈ ಕೃತಿ, ಕಳೆದ ಮೂರು ದಶಕಗಳಲ್ಲಿನ ಕನ್ನಡ ಪತ್ರಿಕೋದ್ಯಮದ ಏಳುಬೀಳುಗಳನ್ನು ಚರ್ಚಿಸಿದ್ದರೂ, ಪರೋಕ್ಷವಾಗಿ ನಿರ್ದಿಷ್ಟ ಕಾಲಘಟ್ಟದ ಸಾಮಾಜಿಕ ಸ್ಥಿತ್ಯಂತರಗಳ ಕುರಿತೂ ಸಹೃದಯರ ಗಮನಸೆಳೆಯುತ್ತಿದೆ. ಸೃಜನಶೀಲ ಪತ್ರಕರ್ತನೊಬ್ಬ ಸಮಾಜವಿಜ್ಞಾನಿಯೂ ಆಗಿರುತ್ತಾನೆ ಎನ್ನುವುದಕ್ಕೆ ಈ ಅಧ್ಯಯನ ಕಥನ ಉದಾಹರಣೆಯಂತಿದೆ; ಪತ್ರಿಕೋದ್ಯಮ ಎನ್ನುವುದು ಸಮಾಜದ ಪ್ರತಿಬಿಂಬವೂ ಗತಿಬಿಂಬವೂ ಆಗಿರುತ್ತದೆ ಎನ್ನುವುದಕ್ಕೆ ನಿದರ್ಶನವೂ ಆಗಿದೆ.

ಸಾಮಾನ್ಯವಾಗಿ ಪಿಎಚ್.ಡಿ. ಹಾಗೂ ಡಿ.ಲಿಟ್. ಪದವಿಯ ಮಹಾಪ್ರಬಂಧಗಳಲ್ಲಿ ಮಾಹಿತಿಯೇ ಮೇಲುಗೈಯಾಗಿ, ಒಳನೋಟಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆಯಿರುತ್ತವೆ. ಜಡ ನಿರೂಪಣೆ ಕೂಡ ಆ ಪ್ರಬಂಧಗಳು ಓದುಗರಿಂದ ದೂರ ಉಳಿಯಲು ಕಾರಣವಾಗುತ್ತದೆ. ಪದ್ಮರಾಜ ದಂಡಾವತಿ ಅವರ ಕೃತಿಯ ಮಹತ್ವ ಇರುವುದು ಇಲ್ಲಿಯೇ: ಅವರ ಅಧ್ಯಯನದಲ್ಲೂ ಮಾಹಿತಿ–ಅಂಕಿಅಂಶ ಕಿಕ್ಕಿರಿದಿವೆ. ಆದರೆ, ಆ ಕ್ರೋಡೀಕರಣ ವಿಶ್ಲೇಷಣೆಗೆ ಪೂರಕವಾಗಿ ಬಳಕೆಯಾಗಿದೆ. ನೇರ ಹಾಗೂ ಲವಲವಿಕೆಯ ಭಾಷೆ ಪ್ರಬಂಧವನ್ನು ಓದುಗಸ್ನೇಹಿಯನ್ನಾಗಿಸಿದೆ.

'ಪ್ರಜಾವಾಣಿ' ಪತ್ರಿಕೆಯ ಕಾರ್ಯ ನಿರ್ವಾಹಕ ಸಂಪಾದಕರಾಗಿ ದುಡಿದ ಅನುಭವ ಕೂಡ ಈ ಕೃತಿಯ ಪಕ್ವತೆಗೆ ಕಾರಣವಾಗಿದೆ. 'ಅಂಚಿನಲ್ಲಿ ಉಳಿದ ಗ್ರಾಮ ಸಂವೇದನೆ' ಹಾಗೂ 'ಮಹಿಳೆ: ಅಲಂಕಾರಕ್ಕಾಗಿ ಮಾತ್ರ' ಅಧ್ಯಯನಗಳು ಲೇಖಕರ ಅನುಭವ, ಒಳನೋಟಗಳೊಂದಿಗೆ ಸಾಮಾಜಿಕ ಕಾಳಜಿಯನ್ನೂ ಬಿಂಬಿಸುವಂತಹವು. 'ಜಾತಿ ಅಂತರ ಕಾಯ್ದುಕೊಂಡ ಮಾಧ್ಯಮ' ಎನ್ನುವ ಶೀರ್ಷಿಕೆಯೇ ಕನ್ನಡ ಪತ್ರಿಕಾ ಕುಟುಂಬಗಳು ಬಹುತ್ವವನ್ನು ಯಾವ ಬಗೆಯಲ್ಲಿ ಒಳಗೊಂಡಿವೆ ಎನ್ನುವುದನ್ನು ಸೂಚಿಸುವಂತಿದೆ. ಲಿಂಗ ಹಾಗೂ ಜಾತಿ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಲೇಖಕರ ಪ್ರಶ್ನೆಗಳಿಗೆ ಕನ್ನಡ ಪತ್ರಿಕೆಗಳ ಸಂಪಾದಕರು ನೀಡಿರುವ ಉತ್ತರಗಳು, ಆ ಪತ್ರಿಕೆಗಳ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಧ್ವನಿಸುವಂತಿವೆ.

ಈ ಕೃತಿಯ ವಿಶೇಷ ಇರುವುದು ಲೇಖಕರ ಪ್ರಾಮಾಣಿಕತೆಯಲ್ಲಿ. ಕನ್ನಡ ಪತ್ರಿಕೆಗಳ ಓರೆಕೋರೆಗಳು, ನಿಲುವುಗಳ ಕುರಿತು ಚರ್ಚಿಸುವ ಲೇಖಕರು, ತಮ್ಮ ಟೀಕೆಟಿಪ್ಪಣಿಗಳಿಂದ ತಾವು ಕೆಲಸ ಮಾಡಿದ ಪತ್ರಿಕೆಯನ್ನೇನೂ ಹೊರಗಿಟ್ಟಿಲ್ಲ. ಪತ್ರಿಕೋದ್ಯಮದ ಕುರಿತ ಚರ್ಚೆಗಳು ಸಾಮಾನ್ಯವಾಗಿ ಭಾವುಕತೆಯನ್ನು ಅವಲಂಬಿಸಿರುತ್ತವೆ. ಅಂಕಿಅಂಶಗಳು, ವಸ್ತುನಿಷ್ಠ ವಿಶ್ಲೇಷಣೆ ಹಾಗೂ ಒಳನೋಟಗಳ ಕಾರಣದಿಂದಾಗಿ 'ಕನ್ನಡ ಪತ್ರಿಕೋದ್ಯಮ: ಮೂವತ್ತು ವರ್ಷ ಕೃತಿ' ಮಹತ್ವದ್ದಾಗಿದೆ, ವಿರಳ ಕೃತಿಗಳ ಸಾಲಿಗೆ ಸೇರುತ್ತದೆ ಹಾಗೂ ನಿಜವಾದ ಅರ್ಥದಲ್ಲಿ ಮಹಾಪ್ರಬಂಧ ಎನ್ನಿಸಿಕೊಳ್ಳುತ್ತದೆ.

**ಲೇ: ಪದ್ಮರಾಜ ದಂಡಾವತಿ; ಪು: 326; ಬೆ: ₹ 300; ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ; ಫೋನ್: 9916197291.**